ಈ ಚಟುವಟಿಕೆ ಕೇಂದ್ರಿತ ಮ್ಯಾಪಿಂಗ್ ಅವಶ್ಯಕತೆ ಇದೆ ಎಂದು ತಿಳಿಸುತ್ತಿದ್ದ. ಅದಕ್ಕೆ ಈಗ ಬೇಡಿಕೆ ಜಾಸ್ತಿಯಾಗ್ತಿದೆ.'

'ಹಾಗಂತಾ ನೀನೂ ನಮ್ಮ ಚಟುವಟಿಕೆಗಳ ಮ್ಯಾಪಿಂಗ್ ಮಾಡುತ್ತಿರುವೆಯಾ ರಜತ್?'

'ಏಯ್... ನಾನು ವ್ಯಾಪಾರದ ದೃಷ್ಟಿಯಿಂದ ನಿಮ್ಮ ಲೊಕೇಷನ್ ಹಿಸ್ಟರಿ ತೆಗೆದುಕೊಂಡಿಲ್ಲ ಭವಿತಾ, ನನ್ನ ಜೀವನದ ವೈಯಕ್ತಿಕ ಕ್ಷಣಗಳ ಸೆರೆ ಹಿಡಿಯುವಿಕೆಯಷ್ಟೇ.'

'ಈಗಲೇ ನಿನಗೆ ಆ ಆಲೋಚನೆ ಬರಬೇಕೇ? ನಮ್ಮ ಮದುವೆಗೆ ಒಂದು ತಿಂಗಳು ಬಾಕಿ ಇದೆ' ನೆನಪಿಸಿದಳು.

'ಗೊತ್ತು ನನಗೆ, ನನ್ನ ವೃತ್ತಿ ಜೀವನದ ಕೌಶಲ್ಯದ ಚೂರೊಂದನ್ನು ನಮ್ಮ ಬಂಧುಗಳಿಗೂ ಉಣಬಡಿಸೋಣವೆಂಬ ಇರಾದೆ.'

'ತಿಳಿಯಿತು, ಆದರೆ ನೀವು ಕೊಂಚ ಮದುವೆ ತಯಾರಿ ಕಡೆ ಗಮನಹರಿಸಬೇಕಿದೆ ಎಂದು ಮನೆಯವರ ಆಶಯ' ಹೇಳಬೇಕಾದ್ದನ್ನು ಹೇಳಿಯಾಗಿತ್ತು.

'ನನಗೆ ಮದುವೆಯ ತಯಾರಿಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ಮುನ್ನ ಈ ಪ್ರಾಜೆಕ್ಟ್ ಮುಗಿಯಲಿ ಎಂಬ ಆಸೆ. ಇದರ ಯಶಸ್ಸಿನ ಆಧಾರದ ಮೇಲೆ ಬೇರೆ ಪ್ರಾಜೆಕ್ಟ್‌ಗಳನ್ನು ಕೈಗೆತ್ತಿಕೊಳ್ಳಲಿಕ್ಕೆ ಸಾಧ್ಯವಿದೆ. ಎಲ್ಲರೂ ಯಶಸ್ಸಿನ ಮೇಲೆ ಪ್ರಾಜೆಕ್ಟ್‌ನ ಸಾರ್ಥಕತೆ ಅಳೆಯುವವರಲ್ಲವೇ?'

'ಅದು ಗೊತ್ತಿದೆ, ಆದರೆ ನೀವ್ಯಾಕೆ ನಿಮ್ಮ ಕೆಲಸದ ಬಗ್ಗೆ ಮ್ಯಾನೇಜರ್‌ರವರಿಗಾಗಲಿ ನನಗಾಗಲಿ ಅರ್ಥೈಸುವಂತೆ ತೋರಿಸುತ್ತಿಲ್ಲ. ಅವರಿಗೆ ಕೆಲಸದ ಪ್ರಗತಿ ತಿಳಿಯಬೇಕಲ್ಲವೇ?'

'ಅರೆ ಭವಿತಾ... ನಾನೇನನ್ನೂ ರಹಸ್ಯವಾಗಿಡಲು ಪ್ರಯತ್ನಿಸುತ್ತಿಲ್ಲಾ. ನಿನಗೇ ತಿಳಿದಿರುವಂತೆ ನಾನು ಬೆಳಗ್ಗಿಂದ ರಾತ್ರಿಯವರೆಗೂ ಈ ಕೆಲಸದಲ್ಲೇ ತೊಡಗಿಸಿಕೊಂಡಿದ್ದೀನಿ. ಕೂಸು ಹುಟ್ಟುವ ಮುನ್ನ ಅದು ಹೇಗಿದೆ ಎಂದು ತಿಳಿದುಕೊಳ್ಳುವ ಕುತೂಹಲವೇಕೆ?' ರಜತ್ ಶಾಂತವಾಗಿ ಉತ್ತರಿಸಿದ. ಆದರೆ ಅವನ ಉತ್ತರ ಭವಿತಾಳಿಗೆ ಸಮಾಧಾನ ತರದಾಗಿತ್ತು. ಅವನನ್ನು ಕೆಣಕಿಯಾದರೂ ಅವನ ಕೆಲಸದ ಇಣುಕು ನೋಟ ದಕ್ಕಿಸಿಕೊಳ್ಳಬೇಕೆಂಬ ಛಲತೊಟ್ಟಳು. ಒಂದೆಡೆ ಮ್ಯಾನೇಜರ್ ಆಶಿಶ್‌ನ ಒತ್ತಡ... ಮತ್ತೊಂದೆಡೆ ಭವಿತಾಳ ಒಲ್ಮೆಕೆ.

ಎರಡು ಕೋರಿಕೆಗಳೂ ಸಹಜವಾದುದೇ, ಇನ್ನು ಒಂದೇ ವಾರ. ಈ ಪ್ರಾಜೆಕ್ಟ್ ಕೆಲಸ ಒಂದು ಹಂತಕ್ಕೆ ಬಂದಂತೆಯೇ, ಅಲ್ಲಿಯವರೆಗೂ ಕಾಯದಿರುವಂತೆ ತಾನು ಕುತೂಹಲ ಹುಟ್ಟಿಸಿದ್ದೆನೇನೋ... ರಜತ್‌ನಿಗೆ ಒಳಗೊಳಗೇ ನಗು ಬಂತು. ಆದರೆ ದಾರವನ್ನು ಹೆಚ್ಚು ಎಳೆದರೆ ತಾಳ್ಮೆ ಕೆಟ್ಟು ಯಾವುದಾದರೂ ಅನಾಹುತವಾಗಬಹುದೆಂಬ ಜಾಗರೂಕತೆಯಿಂದ ರಜತ್ ಒಂದು ಸಮಯ ನಿಗದಿಪಡಿಸಿ ಮ್ಯಾನೇಜರ್ ಆಶಿಶ್‌ರವರಿಗೆ ಪರಿವೀಕ್ಷಣೆಗೆ ಆಹ್ವಾನ ಇತ್ತ. ಆಶಿಶ್ ಅವರು ಇದನ್ನೇ ಕಾಯುತ್ತಿರುವವರಂತೆ ಕೂಡಲೇ ಅದಕ್ಕೆ ಸ್ಪಂದಿಸಿ 'ಆಗಲಿ' ಎಂದಿದ್ದರು.



ಅವರು ರಜತ್‌ನೊಂದಿಗೆ ಕಳೆದ ಎರಡು ವರ್ಷಗಳಿಂದ ಒಡನಾಡಿದ್ದರಿಂದ ಅವರ ನಡುವೆ ಆತ್ಮೀಯತೆ ಬೆಳೆದಿತ್ತು. ಲಘುವಾಗಿಯೇ ಆಶಿಶ್‌ರವರನ್ನು ಸ್ವಾಗತಿಸಿ ತನ್ನ ಬದಿಯ ಕುರ್ಚಿಯನ್ನು ಅವರು ಕುಳಿತುಕೊಳ್ಳಲು ಎಳೆದ. ಆಶಿಶ್ ಪ್ರಾಜೆಕ್ಟ್ ಹಾಗೂ ಮಾರುಕಟ್ಟೆಯ ವ್ಯವಹಾರ ನೋಡಿಕೊಳ್ಳುವವನಾದ್ದರಿಂದ ಅದರ ನಡುವಿನ ಕೊಂಡಿಯಾಗಿದ್ದ. ನೂತನ ಪ್ರಾಜೆಕ್ಟ್‌ಗಳನ್ನು ತರುವುದಾಗಲೀ ಅದರ ಪ್ರಚಾರ ಕಾರ್ಯ ಅವನ ವ್ಯಾಪ್ತಿಗೇ ಬರುತ್ತಿತ್ತು.

"ಹಾಯ್ ರಜತ್, ನೀನು ಪ್ರಾರಂಭದಲ್ಲಿ ಹೇಳಿದ್ದೇನು. 'ನೆನ್ನೆಗಳ ಮೆಲುಕು... ಇಂದಿನ ಅನುಭವ... ನಾಳೆಗಳ ಕನಸುಗಳ ಮಾರಾಟ...' ಎಂತಹ ಸ್ಲೋಗನ್ ಕಣೋ ನಿಂದು. ಆದರೆ ನಿನ್ನ ಈ 3ಡಿ ಮಿಷನ್‌ನ ನಕ್ಷೆ ಪೂರ್ಣವಾಗಿದೆಯೋ ಇಲ್ಲವೋ?"

"ಕೆಲಸವಾಗ್ತಿದೆ ಬಾಸ್, ಮುಕ್ಕಾಲು ಭಾಗ ಚಟುವಟಿಕೆಗಳ ಸ್ಥಳದ ಮ್ಯಾಪಿಂಗ್ ಆಗಿದೆ. ಅದಕ್ಕೆ ಭವಿಷ್ಯತ್ತಿನ ತುಣುಕಿನ ನೋಟ ಕಾಣಿಸಬೇಕಿದೆ."

"ನೀನು ಹೆಚ್ಚು ಸಮಯ ತೆಗೆದುಕೊಳ್ಳುವಂತಿಲ್ಲ ರಜತ್. ಕೆಲವು ಕಂಪನಿಗಳಿಂದ ಬೇರೆ ಪ್ರಾಜೆಕ್ಟ್‌ಗಳಿಗೆ ಬೇಡಿಕೆ ಬರ್ತಿದೆ. ಅದನ್ನು ಕೈಗೆತ್ತಿಕೊಳ್ಳದಿದ್ದರೆ ನಮ್ಮ ಕಂಪನಿಯ



ಬಿಜ್‌ನೆಸ್ ಕೆಳಗಾಗುತ್ತೆ. ಈಗಾಗಲೇ ಕೆಲವು ಪ್ರಾಜೆಕ್ಟ್‌ಗಳನ್ನು 'ಡ್ರಾಯಿಂಗ್ ಬೆಂಚ್'ಗೆ ಕಳುಹಿಸಿದ್ದೀನಿ. ಅವರು ಅದನ್ನು ಪೂರ್ಣಾವಧಿ ಅಧ್ಯಯನ ಮಾಡಿದ ಬಳಿಕ ಕ್ಷೇತ್ರ ಕೆಲಸಕ್ಕೆ ರವಾನೆಯಾಗುತ್ತೆ. ತದನಂತರ ನನ್ನ ಬಳಿಗೆ ಬರುತ್ತೆ. ಅಷ್ಟರಲ್ಲಿ ನೀನು ತಯಾರಾಗಿರಬೇಕು."

"ಈಗ ನಾನು ಕೈಗೆತ್ತಿಕೊಂಡಿರುವ ಪ್ರಯೋಗ ಇದುವರೆಗೆ ಮಾಡಿಲ್ಲ ಬಾಸ್, ಕೆಲವೇ ದಿನ ಅಷ್ಟೇ."

"ಈಗ ಅದರ ಪರಿವೀಕ್ಷಣೆ ಮಾಡಬಹುದೇ?"

"ಓಹ್ ಖಂಡಿತ..." ಎಂದವನೇ ಅವರನ್ನು ದೀರ್ಘಾವಧಿ ಪಯಣಕ್ಕೆ ಸಜ್ಜುಗೊಳಿಸಿದ. ಹೋಲೋಗ್ರಾಫಿಕ್ ಬಿಂಬಗಳಲ್ಲಿನ ಒಂದು ರಂಧ್ರದ ಮೂಲಕ ಅವಲೋಕಿಸಲು ಅವಕಾಶ ಕಲ್ಪಿಸಿದ. ಆಶಿಶ್ ವಿಶೇಷ ಕನ್ನಡಕದ ಮೂಲಕ ವೀಕ್ಷಿಸುವಾಗ ರಜತ್ ಅವನ ಪಯಣದಲ್ಲಿ ಜೊತೆಯಾದ. ರಂಧ್ರದ ಮೂಲಕ ಹಾದ ಅವರ ದೃಷ್ಟಿ ಹಲವಾರು ವರ್ಷಗಳ ಹಿಂದೆಡೆ ಹಾಯಿಸಿತು. ರಜತ್‌ನ ಚಿಕ್ಕಂದಿನ ತುಂಟಾಟ, ಶಾಲೆಗೆ ಹೋಗುವಾಗ ಹಾದ ರಸ್ತೆಗಳು, ಶಾಲೆಗೆ ಹಾಜರಿ, ಬಾಲ್ಯದ ಗೆಳೆಯರ ಜೊತೆ ಆಡಿದ ಕ್ರಿಕೆಟ್ ಆಟ, ಆಟ ಜಾಸ್ತಿಯಾದಾಗ ಪಾಠದಲ್ಲಿ ಹಿಂದೆ ಬಿದ್ದಿದ್ದು, ಹಾಸ್ಟೆಲ್‌ಗೆ ಸೇರಿದ್ದು, ಅಲ್ಲಿನ ಜೀವನ, ತದನಂತರ ಕಾಲೇಜು ಹಂತ, ಮಧ್ಯದಲ್ಲಿ ಆರೋಗ್ಯ ಕೆಟ್ಟು ಆಸ್ಪತ್ರೆ ಸೇರಿದ್ದು, ಉನ್ನತ ವಿದ್ಯಾಭ್ಯಾಸ, ಕೆಲಸಕ್ಕೆ ಸೇರುವಿಕೆ..., ಇದರ ಮಧ್ಯೆ ತಂದೆ ತಾಯಿಯರ ಪಾತ್ರವೂ ಹಾದು ಹೋಗಿತ್ತು.

"ನೀನು ಕೆಲವೊಂದು ಅಹಿತಕರ ಘಟನೆಗಳನ್ನು ತಂದಿರುವೆಯಲ್ಲಾ, ಆ ಘಟ್ಟಕ್ಕೆ ಬಂದಾಗ ಸುಗಮ ಪಯಣದ ನಡುವೆ ಕಲ್ಲುಬಂಡೆ ತಂದಿಟ್ಟಂಗಾಗುತ್ತೆ."

"ಪ್ರತಿಕೂಲ ಪರಿಸ್ಥಿತಿಯನ್ನು ಹೇಗೆ ನಿಭಾಯಿಸಲಾಯಿತು ಎಂಬುದರ ಬಗ್ಗೆ ಅರಿವು ಮೂಡಿಸುವ ಉದ್ದೇಶವಷ್ಟೇ."

ಹೋಲೋಗ್ರಾಫಿಕ್ ಪ್ರಕಾಶಬಿಂಬದ ನಕ್ಷೆಯಲ್ಲಿ ಹಾವು ಏಣಿ ಆಟದಂತೆ ಕೆಲವು ಜೀವನದ ಕ್ಷಣಗಳಲ್ಲಿ ಏರುಪೇರುಗಳು ಕಂಡುಬಂದಿತು. ಇದೇನು ಖುಷಿಯ ಗಳಿಗೆ ಎಂದು ಸಂಭ್ರಮಿಸುವಷ್ಟರಲ್ಲಿ ಯಾರಾದರೊಬ್ಬರ ಜೀವನದಲ್ಲಿ ಕುಗ್ಗುವಂತಹ ಪರಿಸ್ಥಿತಿ. ಇದರ ವೀಕ್ಷಣೆ ಹಲವಾರು ವರ್ಷಗಳ ಹಿಂದಿನ ದಿನಚರಿಯನ್ನು ನೆನಪಿಸುವಂತಿತ್ತು. ರೇಡಿಯೊದಲ್ಲಿ ಬೆಳಗ್ಗಿನ ಸುಪ್ರಭಾತವನ್ನು ರಜತ್ ತಂದೆ ಧಾರೇಶ್ವರ್‌ರವರಿಗೆ ಆಲಿಸುವ ಅಭ್ಯಾಸವಾದರೆ ತಾಯಿ ಸುಶೀಲಳಿಗೆ ಮನೆಯ ಹೊಸ್ತಿಲ ಮುಂದೆ ಸ್ವಚ್ಛಗೊಳಿಸಿ ರಂಗೋಲಿ ಬಿಡಿಸುವ ಅಭ್ಯಾಸ. ವೈವಿಧ್ಯಮಯ ರಂಗೋಲಿಗಳನ್ನು ಬಿಡಿಸಿದ ಕ್ಷಣಗಳು ಲೊಕೇಷನ್ ಹಿಸ್ಟರಿಯಿಂದ ಡೌನ್‌ಲೋಡ್ ಮಾಡಿಕೊಂಡು ನಕ್ಷೆಯಲ್ಲಿ ಅಳವಡಿಸಲಾಗಿತ್ತು.

ಆಶಿಶ್ ರಜತ್‌ನ ಕ್ರಿಕೆಟ್ ಆಟದ ಪಯಣದಲ್ಲಿ ಭಾಗಿಯಾದಾಗ ಅವನ ಬಗ್ಗೆ ಹಿಂದೆ ಇದ್ದ ಭಾವನೆಯೇ ಮರೆತು ಹೋದಂತಾಗಿ ಆಶ್ಚರ್ಯದಿಂದ ಉದ್ಗರಿಸಿದ.

'ನೀನು ಈ ಕ್ಷೇತ್ರಕ್ಕೆ ಬರದೆ ಕ್ರಿಕೆಟ್ ಆಟದ ಕಡೆನೇ ಕೇಂದ್ರೀಕರಿಸಿದ್ದರೆ ನೀನೀಗಾಗಲೇ ಬಹುದೊಡ್ಡ ಆಟಗಾರನಾಗುತ್ತಿದ್ದೆಯಲ್ಲಾ ರಜತ್'! ಅವನ ಅಮೋಘ ಸಿಕ್ಸರ್‌ಗಳು ಪೆವಿಲಿಯನ್‌ನಲ್ಲಿ ಕೂತವರನ್ನು ಕುಣಿದು ಕುಪ್ಪಳಿಸುವಂತೆ ಮಾಡಿತ್ತು. ನಕ್ಷೆಯ ಭೂತಕಾಲದ ವೀಕ್ಷಣೆಯಿಂದ ಹೊರಬರಬೇಕಾದರೆ ವ್ಯಕ್ತಿಗಳಿಗೆ ಬೆಳಕಿಂಡಿಯಂತಹ ಪ್ರವೇಶಿಕೆಯಿದ್ದು ಅದರ ಮೂಲಕವೇ ಆ ಕಾಲದ ಪರಿಧಿಯಿಂದಾಚೆ ಬರಬಹುದಾಗಿತ್ತು. ಇಂದಿನ ವರ್ತಮಾನದಲ್ಲಿ ವ್ಯವಹರಣೆಗಿಳಿಯಬೇಕಾದರೆ ಕೆಲವು ನಿಮಿಷಗಳನ್ನು 'ಗ್ರೌಂಡಿಂಗ್'ಗಾಗಿ ವಿನಿಯೋಗಿಸುವ ಅವಶ್ಯಕತೆಯಿತ್ತು. ತದನಂತರ ಆಶಿಶ್ ನಿದ್ದೆಯಿಂದ ಎಚ್ಚರಗೊಂಡಂತೆ ಭ್ರಮಾಲೋಕ ದರ್ಶನವೋ ವಾಸ್ತವವೋ ಎಂಬ ಗೊಂದಲಕ್ಕೆ ಒಳಗಾಗಿ ರಜತ್‌ನ ಬೆನ್ನು ತಟ್ಟಿದ.

"ಇದೇನು ಮಾಯೆಯೋ ರಜತ್, ನಾನು ಒಂದು ಕಾಲದ ವೀಕ್ಷಣೆಗೆ ತೆಗೆದುಕೊಂಡಿದ್ದು ಹತ್ತು ನಿಮಿಷವಾದರೂ ಒಂದು ಕಾಲಮಾನದ ಪಯಣವೆಂಬಂತೆ ಭಾಸವಾಯಿತು. ಇನ್ನು